ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಮರಿತಿಬ್ಬೇಗೌಡ , ಶ್ರೀ ದಿನೇಶ್ ಗೂಳಿಗೌಡ ಹಾಗೂ ಶ್ರೀ ಮಧು ಜಿ. ಮಾದೇಗೌಡ ಇವರ ನಿಯಮ 72 ರ ಅಡಿಯಲ್ಲಿನ ಗಮನ ಸೆಳೆಯುವ ಸೂಚನೆ ಸಂಖ್ಯೆ:48ಕ್ಕೆ ಮಾನ್ಯ ಮುಖ್ಯಮಂತ್ರಿಯವರ ಉತ್ತರ.

ಪ್ರಶ್ನೆ:

ಪ್ರಸಕ್ತ ಸಾಲಿನ ಮುಂಗಾರು ಋತುವಿನಲ್ಲಿ ಕೇಂದ್ರ ಸರ್ಕಾರ ಎಂ.ಎಸ್.ಪಿ ಯೋಜನೆಯಡಿ ಭತ್ತ ಮತ್ತು ರಾಗಿ ಖರೀದಿ ಸಂಬಂಧ ಇದುವರೆವಿಗೂ ರಾಜ್ಯದಲ್ಲಿ 4 ಜಿಲ್ಲೆಗಳಿಗೆ ಮಾತ್ರ ಖರೀದಿ ಕೇಂದ್ರ ತೆರೆಯಲು ಅನುಮತಿ ನೀಡಿ ಭತ್ತ ಮತ್ತು ರಾಗಿ ಖರೀದಿ ಕೇಂದ್ರಗಳನ್ನು ಮೈಸೂರು, ಮಂಡ್ಯ, ಚಾಮರಾಜನಗರ, ತುಮಕೂರು ಮತ್ತು ಹಾಸನ ಈ ಭಾಗದಲ್ಲಿ ತೆರೆಯದೆ ಇರುವುದು ಹಾಗೂ ರಾಜ್ಯ ಸರ್ಕಾರ ಬೆಂಬಲ ಬೆಲೆ ನಿಗದಿಗೊಳಿಸದೆ ಇರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇವೆ.

ಉತ್ತರ:

2022-23ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 5.00 ಲಕ್ಷ ಮೆಟ್ರಿಕ್ ಟನ್ ಭತ್ತ, 5.00 ಲಕ್ಷ ಮೆಟ್ರಿಕ್ ಟನ್ ರಾಗಿ ಮತ್ತು 2.00 ಮೆಟ್ರಿಕ್ ಟನ್ ಬಿಳಿ ಜೋಳವನ್ನು ಖರೀದಿಸಲು ಕೇಂದ್ರ ಸರ್ಕಾರವು ಅನುಮತಿಯನ್ನು ನೀಡಿದೆ. ಅದರಂತೆ ಜಿಲ್ಲಾವಾರು ಖರೀದಿ ಏಜೆನ್ಸಿಗಳನ್ನು ನೇಮಿಸಲಾಗಿದೆ. ಸದರಿ ಖರೀದಿ ಏಜೆನ್ಸಿಗಳು ಜಿಲ್ಲೆಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಖರೀದಿ ಕೇಂದ್ರಗಳನ್ನು ತೆರೆದು, ಭತ್ತ, ರಾಗಿ ಮತ್ತು ಬಿಳಿಜೋಳವನ್ನು ಮಾರಾಟ ಮಾಡಲು ಇಚ್ಛಿಸುವ ರಾಜ್ಯದ ರೈತರ ನೋಂದಣಿ ಕಾರ್ಯವನ್ನು ದಿನಾಂಕ:15.12.2022 ರಿಂದ ಪ್ರಾರಂಭಿಸಲಾಗುತ್ತಿದೆ. ಅದರಂತೆ ದಿನಾಂಕ:01.01.2023 ರಿಂದ ದಿನಾಂಕ:31.03.2023ರವರೆಗೆ ನೋಂದಾಯಿತ ರೈತರಿಂದ ಭತ್ತ, ರಾಗಿ ಮತ್ತು ಬಿಳಿಜೋಳವನ್ನು ಖರೀದಿಸಲಾಗುತ್ತದೆ.

ಮುಕ್ತ ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಬೆಲೆಯ ಸ್ಥಿರತೆಯನ್ನು ಕಾಯ್ದುಕೊಳ್ಳುವ ಸಲುವಾಗಿ ಕೇಂದ್ರ ಸರ್ಕಾರವು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಆಹಾರ ಧಾನ್ಯಗಳನ್ನು ಖರೀದಿಸುತ್ತದೆ. ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸುವ ಆಹಾರ ಧಾನ್ಯಕ್ಕೆ ಕೇಂದ್ರ ಸರ್ಕಾರವು ಖರೀದಿ ದರವನ್ನು ನಿಗದಿಪಡಿಸಿ ಆದೇಶಿಸಿದ್ದು, ಈ ಕೆಳಗಿನಂತೆ ದರವನ್ನು ನಿಗದಿಪಡಿಸಲಾಗಿದೆ.

| ಬೆಳೆ | | ಖರೀದಿ ಗುರಿ (ಲಕ್ಷ ಮೆಟ್ರಿಕ್ ಟನ್ ಗಳಲ್ಲಿ) | ದರ ಪ್ರತಿ ಕ್ವಿಂಟಾಲ್ |
|---|---|---|---|
| ಭತ್ತ | ಸಾಮಾನ್ಯ | 5.00 | 2040 |
| | ಗ್ರೇಡ್-ಎ | | 2060 |
| ಜೋಳ | ಹೈಬ್ರಿಡ್ | 2.00 | 2970 |
| | ಮಾಲ್ದಂಡಿ | | 2990 |
| ರಾಗಿ | | 5.00 | 3578 |

ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಸಾರ್ವಜನಿಕ ವಿತರಣಾ ಪದ್ಧತಿಯಡಿ ಕುಚ್ಚಲಕ್ಕಿಯನ್ನು ವಿತರಿಸುವಂತೆ ಪಡಿತರ ಫಲಾನುಭವಿಗಳ ಬೇಡಿಕೆ ಇರುತ್ತದೆ. ಈ ಹಿನ್ನಲೆಯಲ್ಲಿ ಸ್ಥಳೀಯವಾಗಿ ಬೆಳೆಯುವ ತಳಿಗಳ ಭತ್ತವನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿ ಸದರಿ ಭತ್ತವನ್ನು ಕುಚ್ಚಲಕ್ಕಿಯನ್ನಾಗಿ ಪರಿವರ್ತಿಸಿ 03 ಜಿಲ್ಲೆಗಳಲ್ಲಿನ ಪಡಿತರ ಫಲಾನುಭವಿಗಳಿಗೆ ವಿತರಿಸಲು ಕೇಂದ್ರ ಸರ್ಕಾರವು ಅನುಮತಿಯನ್ನು ನೀಡಿರುತ್ತದೆ. ಈ ಹಿನ್ನಲೆಯಲ್ಲಿ ದಕ್ಷಿಣ ಕನ್ನಡ ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬೆಳೆಯುವ ಸ್ಥಳೀಯ ತಳಿಗಳಾದ ಜಯಾ, ಜ್ಯೋತಿ, ಕಜೆ, ಸಹ್ಯಾದ್ರಿ, ಅಭಿಲಾಷ, ಉಮಾ ಮತ್ತು MO4 ಭತ್ತವನ್ನು ಸ್ಥಳೀಯ ರೈತರಿಂದ ಖರೀದಿಸಿ ಕುಚ್ಚಲಕ್ಕಿಯನ್ನಾಗಿ ಪರಿವರ್ತಿಸುವ ಸಲುವಾಗಿ ರಾಜ್ಯ ಸರ್ಕಾರವು ಸದರಿ ತಳಿಗಳ ಭತ್ತಕ್ಕೆ ಪ್ರತಿ ಕ್ವಿಂಟಾಲ್‌ಗೆ ರೂ.500/-ಗಳ ಪ್ರೋತ್ಸಾಹಧನವನ್ನು ನಿಗಧಿಪಡಿಸಿದೆ. ಸದರಿ ಜಿಲ್ಲೆಗಳ ರೈತರ ನೋಂದಣಿ ಕಾರ್ಯವನ್ನು ದಿನಾಂಕ:21.11.2022 ರಿಂದ ಪ್ರಾರಂಭಿಸಲಾಗಿದೆ ಹಾಗೂ ಭತ್ತ ಖರೀದಿ ಅವಧಿಯನ್ನು ದಿನಾಂಕ:01.12.2022 ರಿಂದ 28.02.2023 ರವರೆಗೆ ನಿಗದಿಪಡಿಸಲಾಗಿದೆ.

ಆನಾಸ 195 ಆರ್‌ಪಿಆರ್ 2022 (ಇ-ಆಫೀಸ್)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

C-48